# ಮರೆಯಲಾದೀತೆ ಇಸ್ಪೀಟಾಟದ ಸಂಭ್ರಮ!

■ ಲತಾ ಉದಯ್ ಹೆಗಡೆ



ಇಂದಿನ ದಿನಗಳಲ್ಲಿ ಎಲ್ಲಿ ನೋಡಿದರಲ್ಲಿ ವಿಭಕ್ತ (ನ್ಯೂಕ್ಲಿಯರ್) ಕುಟುಂಬ ವ್ಯವಸ್ಥೆಯೇ ಹೆಚ್ಚಾಗಿ ಕಾಣಸಿಗುತ್ತಿದೆ. ಅಂಥವರ ಮನೆಗಳಲ್ಲಿ ಇರುವುದೇ ಬೆರಳೆಣಿಕೆಯಷ್ಟು ಜನ. ಎಲ್ಲರೂ ಅವರವರ ಓದು, ಕೆಲಸಗಳಲ್ಲಿ ಸದಾ ಮಗ್ನರು ಕಲಿಕೆ ಗಳಿಕೆಯೇ ಜೀವನ ಎಂಬಂತಾಗಿರುವ ವ್ಯವಸ್ಥೆ. ಅಕಸ್ಮಾತ್ ಅದರಿಂದೇನಾದರೂ ಬಿಡುವು ಸಿಕ್ಕಿದಲ್ಲಿ ಅಥವಾ ಅವರೇ ಬಿಡುವು ಮಾಡಿಕೊಂಡಲ್ಲಿ ಅವರ ಮನ ತಣಿಸಲು ಟೀವಿ, ಕಂಪ್ಯೂಟರ್, ಫೇಸ್ ಬುಕ್, ಯೂ ಟ್ಯೂಬ್ , ಗೂಗಲ್, ವಿಡಿಯೊ ಗೇಮ್ಸ್ ಮತ್ತು ಮೊಬೈಲ್ ಇದ್ದೇ ಇದೆ. ಅದರಲ್ಲೂ ಮೊಬೈಲ್ ವಾಟ್ಸಾಪ್ ಹುಚ್ಚಂತೂ ಮಿತಿಮೀರಿದೆ. ಈ ಮೊಬೈಲ್ ಗುಂಗು ಹೇಗೆಂದರೆ ನೆರಳಿನಂತೆ ಹಿಂಬಾಲಿಸುವ ಆ ಪುಟ್ಟ ಯಂತ್ರವನ್ನು ಕ್ಷಣಕಾಲವೂ ಬಿಟ್ಟಿರಲಾರದಂತಹ ಪರಿಸ್ಥಿತಿ. ಹಾಗೇನಾದರೂ ಆದಲ್ಲಿ ಜಗತ್ತೇ ಶೂನ್ಯವೆನ್ನುವಂತಹ ಭಾವ. ಅಷ್ಟರಮಟ್ಟಿಗೆ ಇಂದಿನ ಜನಾಂಗ ಯಂತ್ರಗಳ ಮೇಲೆ ಸಂಪೂರ್ಣ ಅವಲಂಬಿಸಿದೆ.

ಕೆಲವೇ ಕೆಲವು ವರ್ಷಗಳ ಹಿಂದೆ ಅಮೆರಿಕದ ಸಂಸ್ಕೃತಿ, ವ್ಯವಸ್ಥೆಯನ್ನು ಆಡಿಕೊಳ್ಳುತ್ತಿದ್ದೆವು. 'ಸಂಬಂಧಿಕರು, ಪರಿಚಯಸ್ಥರು, ಸ್ನೇಹಿತರ ಮನೆಗಳಿಗೆ ಭೇಟಿಯಾಗಲು ಹೋಗುವುದಾದರೆ ಮೊದಲು ಅಪಾಯಿಂಟ್ಮೆಂಟ್ ತೆಗೆದುಕೊಳ್ಳಬೇಕಂತೆ!' ಆಗ ನಮ್ಮ ಜನ ವಿದೇಶಗಳಿಗೆ ಹೋಗುವುದು ಬಲು ವಿರಳವಾಗಿತ್ತು. ಅವರಿಂದ ಅಲ್ಲಿನ ಇಂತಹ ಕೆಲ ಸುದ್ದಿಗಳನ್ನು ಕೇಳಿ 'ಹೀಗೂ ಉಂಟೇ...!' ಎಂದು ಬೆರಗಾಗಿ ಆಡಿಕೊಳ್ಳುವುದಿತ್ತು. ಆಗ ಅಂದುಕೊಂಡಾಗಲೆಲ್ಲ ಬಂಧು ಬಾಂಧವರ ಮನೆಗಳಿಗೆ ಸಮಯದ ಹಂಗಿಲ್ಲದೇ ಹೋಗುವಷ್ಟು ಬಾಂಧವ್ಯವಿತ್ತು. ಆದರೀಗಿನ ಯಾಂತ್ರಿಕ ಯುಗದಲ್ಲಿ ಧಾವಂತವನ್ನೇ ಬದುಕಾಗಿಸಿಕೊಂಡ ಯಾರನ್ನೇ ಯಾವುದೇ ಸಮಯದಲ್ಲಿ ಕೇಳಿದರೂ 'ಸಮಯವಿಲ್ಲ' ಥಟ್ಟನೆ ಸಿಗುತ್ತದೆ ಸಿದ್ಧ ಉತ್ತರ. ಓದು ಕೆಲಸ ಬಿಡಿ, ಮೂರ್ಖರ ಪೆಟ್ಟಿಗೆಯಲ್ಲಿ ತಲ್ಲೀನರಾದವರ ಮನೆಗಳಿಗೆ ಅಕಸ್ಮಾತ್ ಹೋದಲ್ಲಿ ಬೇಡದ ಅತಿಥಿಗಳು ನೀವು ಎಂಬುದನ್ನು ನಡೆನುಡಿಗಳಲ್ಲಿ ತೋರಿಸಿ ಆದಷ್ಟೂ ಬೇಗ ಸಾಗ ಹಾಕುವ ಹವಣಿಕೆ ನಿಚ್ಚಳವಾಗಿಯೇ ತೋರುತ್ತಾರೆ. ಹಾಗಾಗಿ ಹತ್ತಿರದವರ ಮನೆಗಳಿಗೆ ಹೋಗುವುದಿದ್ದಲ್ಲಿ ಅಮೆರಿಕದಂತೆ ಅಪಾಯಿಂಟ್ಮೆಂಟ್ ಪಡೆದು ಹೋಗುವ ವ್ಯವಸ್ಥೆಗೆ ಹೊಂದಿಕೊಳ್ಳಲೇಬೇಕಾದ ಅನಿವಾರ್ಯತೆ. ರಗಳೆಯೇ ಬೇಡ ಎಂದುಕೊಂಡು ಬೇಸರ ಕಳೆಯಲು ಹಳೆಯ ಆಲ್ಬಮ್‌ಗಳ ಮೊರೆ ಹೋಗುತ್ತಿದ್ದೆ.

ಅಂತಹ ಒಂದು ಸಂದರ್ಭ. ಹಳೆಯ ಆಲ್ಬಮ್‌ನಲ್ಲಿ ಆ ಫೋಟೊ ಕಣ್ಣಿಗೆ ಬಿದ್ದಿತ್ತು. ಅದರಲ್ಲಿ ವಯಸ್ಸಿನ ಅಂತರವಿಲ್ಲದೆ ಎಲ್ಲರೂ ಸೇರಿ ಇಸ್ಪೀಟ್ ಆಟ ಆಡುತ್ತಿದ್ದ ಸಂದರ್ಭ ಸೆರೆಹಿಡಿಯಲ್ಪಟ್ಟದ್ದು ಸವಿನೆನಪಿಗೆ ಜಾರುವಂತೆ ಮಾಡಿತ್ತು. ಅದರಲ್ಲೊಂದು ವಿಶೇಷತೆ ಇದ್ದದ್ದನ್ನೂ ಗಮನಿಸಿದ್ದೆ.

ಅದು ಸುಮಾರು ಇಪ್ಪತ್ತು ವರ್ಷಗಳಷ್ಟು ಹಿಂದಿನ ಸಂದರ್ಭ. ನಮ್ಮದು ಕೂಡು ಕುಟುಂಬವಾಗಿತ್ತು. ಪಕ್ಕದಲ್ಲೇ ಅತ್ತೆಯವರ ತಂಗಿ ಮನೆ. ನಮ್ಮ ಮನೆಯಲ್ಲಿ ದಿನವೂ ಸಂಜೆ ಏಳರಿಂದ ಒಂಭತ್ತರವರೆಗೂ ಹಿರಿಯ ತಲೆಗಳೆಲ್ಲ ಸೇರಿ ಇಸ್ಪೀಟು ಆಡುವ ಪರಿಪಾಠವಿತ್ತು. ನನ್ನ ದೊಡ್ಡ ಮಗ ಆಗ ಮೂರೋ ನಾಲ್ಕೋ ತರಗತಿಯವನಿದ್ದಿರಬೇಕು. ಚಿಕ್ಕವ ಯುಕೆಜಿ. ನನ್ನ ಮಕ್ಕಳ ಓದು, ಹೋಂವರ್ಕ್ ಸಂಜೆ ಏದರೊಳಗೆ ಒಂದು ತಾಸು ಮಾಡಿಸಿ ಮುಗಿಸಿದೆನೆಂದರೆ ತೀರಿತು ಮುಂದಿನ ಓದು ಮರುದಿನ ಶಾಲೆಗೇ ಹೋದ ಮೇಲೆಯೇ! ನಮ್ಮ ಮನೆಯಲ್ಲಿದ್ದದ್ದು ಒಂದು ದೊಡ್ಡ ಪಡಸಾಲೆ, ಎರಡು ರೂಮು ಅಷ್ಟೇ. ಗೋಡೆಯ ಬದಿಯಲ್ಲಿರುವ ಮಂಚವನ್ನೇ ಹಜಾರದ ಮಧ್ಯದಲ್ಲೆಳೆದು ಹಾಕಿ ದೊಡ್ಡ ಟೇಬಲ್ ಆಗಿಸಿ ಸುತ್ತಲೂ ಕುರ್ಚಿ ಹಾಕಿಕೊಂಡು ಕುಳಿತು ಪ್ರತಿ ದಿನವೂ ಇಸ್ಪೀಟು ಆಡುತ್ತಿದ್ದರು. ನೆಂಟರಿಷ್ಟರು ಬಂದರಂತೂ ಇಸ್ಪೀಟ್ ಮಂಡಲಕ್ಕೆ ರಂಗೇರುತ್ತಿತ್ತು.

ವಿಶೇಷವೇನೆಂದರೆ 'ನಾಲ್ಕು ತಲೆಮಾರಿನದ್ದು' ಚಿತ್ರದ ಬಲತುದಿಯಲ್ಲಿದ್ದವರು ಅತ್ತೆಯವರ ತಂದೆ ಮೊದಲ ತಲೆಮಾರಿನವರಾದರೆ ಪಕ್ಕದಲ್ಲಿದ್ದವರು ನನ್ನ ಅತ್ತೆ ಎರಡು (ಪಕ್ಕದಲ್ಲಿ ಮಾವನವರು) ಹಾಗೂ ಕಡುನೀಲಿ ಶರ್ಟಿನವರು ನನ್ನ ಪತಿ ಮೂರು ಮತ್ತು ನನ್ನ ಮಕ್ಕಳಿಬ್ಬರೂ ನಾಲ್ಕನೇ ತಲೆಮಾರಿನವರಾಗಿ ಒಂದೆಡೆ ಕಲೆತು ಆಡುವುದು ನಿಜಕ್ಕೂ ವಿಶೇಷವಲ್ಲವೇ? ಇನ್ನುಳಿದ ಇಬ್ಬರು ಅತ್ತೆಯವರ ತಂಗಿ ಮತ್ತು ಮನೆಯವರು. ಅತ್ತೆಯ ತಾಯಿಯೂ ಚಿತ್ರದಲ್ಲಿದ್ದಾರೆ. ಎಲ್ಲರೂ ದೊಡ್ಡದಾಗಿ ಮಾತನಾಡುತ್ತಲೇ ಜಗಳವಾಡುತ್ತಾ (ಜಗಳ ಮಾಡುತ್ತಿದ್ದದ್ದು ನನ್ನ ಮಾವನವರೊಬ್ಬರೇ) ಕಾಲೆಳೆಯುತ್ತಾ '304, ದಾಡ್ ಫೀಡ್' ಆಡುತ್ತಿದ್ದದ್ದು ನೋಡಲು ಸೊಗಸಾಗಿರುತ್ತಿತ್ತು. ಅಲ್ಲಿ ಸ್ನೇಹ, ಸೌಹಾರ್ದ, ಸಂಬಂಧಗಳ ಅನುಭಾವ, ಹುಸಿಮುನಿಸು, ಮಕ್ಕಳಂತೆ ಜಗಳಗಂಟರಾಗುವುದೂ ಕಾಣ ಸಿಗುತ್ತಿತ್ತು. ದೊಡ್ಡವರ ಈ ಪರಿಗೆ ಚಿಕ್ಕವರಾದ ನಾವೆಲ್ಲಾ ಅಡಗಿಕೊಂಡು ನಗುತ್ತಿದ್ದೆವು.

ವಾಹ್ ..., ಎಂತಹ ಆಹ್ಲಾದಕರ ದಿನಗಳವು. ಇಂದು ಎರಡು ಬಿಟ್ಟರೆ ಮೂರು ಸಂಖ್ಯೆಯ ಸೋ ಕಾಲ್ಡ್ ಕುಟುಂಬ ಹೆತ್ತವರೊಟ್ಟಿಗೇ ಇರುವ ಚಿತ್ರಣವೇ ಇಲ್ಲ. ಇನ್ನು ಅಜ್ಜ, ಮುತ್ತಜ್ಜ...? ಮಕ್ಕಳು ರೆಕ್ಕೆ ಬಲಿತು ಹಾರಿಹೋಗಿವೆ, ಒಂಟಿತನವೇ ನಿರಂತರ ಸಂಗಾತಿಯಾಗಿದೆ. ಆಗೆಲ್ಲಾ ಹಳೆಯ ಆಲ್ಬಮ್‌ಗಳಲ್ಲಿ ಮುಖ ತೂರಿಸಿ ಸವಿನೆನಪಿಗೆ ಜಾರುವುದು ನನ್ನ ಹೊಸ ಹವ್ಯಾಸ. ಬೇಸರಗೊಂಡ ಮನವನ್ನು ಹಗುರಗೊಳಿಸುವ ಯತ್ನವಿದು. ■